ವಾರ್ತಾ ಇಲಾಖೆಯ ಜಾಹಿರಾತುಗಳು

1434(1715); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) 2013–14ನೇ ಸಾಲಿನಿಂದ ಈವರೆವಿಗೂ ವಾರ್ತಾ ಇಲಾಖೆಯ ಮೂಲಕ ಪ್ರಕಟಿಸಲಾದ ಜಾಹೀರಾತುಗಳು ಮತ್ತು ಪ್ರಗತಿಯ ವಿಷಯವಾಗಿ ಮುದ್ರಣ ಮಾಡಿದ ಕೈಪಿಡಿಗಳಿಗೆ ಎಷ್ಟು ಮೊತ್ತವನ್ನು ವೆಚ್ಚ ಮಾಡಿದೆ.

ಆ) ಜಾಹೀರಾತು ಪ್ರಕಟಿಸಲು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ನೀಡಲಾದ ಮೊತ್ತವೆಷ್ಟು (ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸುದ್ದಿ ಮಾಧ್ಯಮಗಳಿಗೆ ನೀಡಿದ ಜಾಹೀರಾತಿನ ವಿವರಗಳನ್ನು ಹೆಸರಿನ ಸಹಿತ ಒದಗಿಸುವುದು)

ಇ) ಸುದ್ದಿ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ಜಾಹೀರಾತು ನೀಡಲು ಇರುವ ಮಾನದಂಡಗಳೇನು?

ಶ್ರೀ ಆರ್. ರೋಷನ್ ಬೇಗ್(ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು)

ಅ) 2013–14ನೇ ಸಾಲಿನ ಜನವರಿ–2014ರ ಅಂತ್ಯದವರೆಗೆ ವಾರ್ತಾ ಇಲಾಖೆಯ ಮೂಲಕ ಪ್ರಕಟಿಸಲಾದ:

* ಜಾಹೀರಾತುಗಳಿಗಾಗಿ – ₹ 11.40 ಕೋಟಿ
* ಕೈಪಿಡಿಗಳಿಗಾಗಿ (ಕಿರುಹೊತ್ತಿಗೆ ಮತ್ತು ವಿವಿಧ ಮಾದರಿಯ ಮಡಿಕೆ ಪತ್ರಗಳ ಮುದ್ರಣಕ್ಕೆ) – ₹ 1.42 ಕೋಟಿ

ಒಟ್ಟು ₹ 12.82 ಕೋಟಿ

ಅ) 2013–14ನೇ ಸಾಲಿನ ಜನವರಿ–2014ರ ಅಂತ್ಯದವರೆಗೆ ವಾರ್ತಾ ಇಲಾಖೆಯಿಂದ ಜಾಹೀರಾತು ಪ್ರಕಟಿಸಲು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ನೀಡಲಾದ ಮೊತ್ತ.

* ಮುದ್ರಣ ಮಾಧ್ಯಮ (ಪತ್ರಿಕೆಗಳು) ₹ 11.11 ಕೋಟಿ

* ವಿದ್ಯುನ್ಮಾನ ಮಾಧ್ಯಮ ₹ 0.29 ಕೋಟಿ

(ಸರ್ಕಾರದ ವಿವಿಧ ಇಲಾಖೆಗಳ ಟೆಂಡರ್ ಜಾಹೀರಾತು, ಸಾಂಧರ್ಭಿಕ ಆಕರ್ಷಕ ಜಾಹೀರಾತುಗಳು ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಮಹಾತ್ಮ ಗಾಂಧಿ ಜಯಂತಿ, ಕರ್ನಾಟಕ ರಾಜ್ಯೋತ್ಸವ, ಸರ್ಕಾರದ ನೂರು ದಿನಗಳ ಆಡಳಿತ ಸಾಧನೆ ಇತ್ಯಾದಿ)

ಇ) ಜಾಹೀರಾತು ನೀಡಲು ಸುದ್ದಿ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ಗೊತ್ತುಪಡಿಸಲಾದ ಮಾನದಂಡ

**ಸುದ್ದಿ ಮಾಧ್ಯಮ:–** ಪತ್ರಿಕೆಯು ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರಬೇಕು.

**ವಿದ್ಯುನ್ಮಾನ ಮಾಧ್ಯಮ:–** ವಿದ್ಯುನ್ಮಾನ ಮಾಧ್ಯಮದ ವಾಹಿನಿಯು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವುದರೊಂದಿಗೆ ಕೇಂದ್ರ ಸರ್ಕಾರದ ಡಿಎವಿಪಿ ವಿಭಾಗ ಅಥವಾ ರಾಜ್ಯ ಸರ್ಕಾರದಿಂದ ಅನುಮೋದನೆಗೊಂಡ ಪ್ರಸಾರ ಶುಲ್ಕ ಹೊಂದಿರಬೇಕು.